**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ.1101/2011</u>**

ದಿನಾಂಕಃ**.05.05.2026** ರಂದು ಸಾಕ್ಷಿಗೆ ಮದ್ಯಾಹ್ನ **1.15** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**9** | ಪ್ರಾಸಾ-**6** |
|---|---|
| ಹೆಸರು | - ನವೀನ್ ಬಿ. |
| ತಂದೆ ಹೆಸರು | - ಬಸವರಾಜಪ್ಪ |
| ವಯಸ್ಸು | - **43** |
| ಉದ್ಯೋಗ | - ಪೋಲಿಸ್ ಇನ್ಸಪೆಕ್ಟರ್ |
| ವಿಳಾಸ | - ತುಮಕೂರು, ಮಹಿಳಾ ಪೋ.ಠಾಣೆ |

**<u>ಮುಖ್ಯವಿಚಾರಣೆ : ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ</u>**

ನಾನು **05.03.2009** ರಿಂದ **12.09.2013** ರವರೆಗೆ ಸಾತನೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕೆಲಸ ನಿರ್ವಹಿಸಿ ದ್ದೇನೆ.

ದಿನಾಂಕಃ **08.09.2012** ರಂದು ಪ್ರಕರಣದ ಕಡತವನ್ನು ಚಾ,ಸಾ. **8** ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದಯಿವರೆಸಿ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಕೊಟ್ಟು ಪಂಚರಾದ ಚಾ.ಸಾ. **6** ಮತ್ತು **7** ರವರ ಸಮಕ್ಷಮ ಬೆಳಗ್ಗೆ **9** ಗಂಟೆಯಿಂದ **10** ಗಂಟೆವರೆಗೆ ಪಂಚನಾಮೆ ಮಾಡಿ ಒಂದು ಹರಿದ ಸೀರೆಯನ್ನು ವಶಪಡಿಸಿಕೊಂಡಿರುತ್ತೇನೆ. ಸೀರೆಯನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ಸೀರೆಯನ್ನು ಇಂದು ನ್ಯಾಯಾಲಯದ ಮುಂದೆ ಇರುವುದಿಲ್ಲ.

ನಂತರ ಅದೇ ದಿನ ಚಾ.ಸಾ. **2** ರಿಂದ **5** ರವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೂಂಡೆ.

ನಂತರ ಅದೇ ದಿನ ತನಿಖೆಯನ್ನು ಮುಕ್ತಾಯಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಂ.ಜಿ. ವಕೀಲರಿಂದಃ**

ನಾನು ಯಾವುದೇ ಸ್ಥಳಕ್ಕೆ ಹೋಗಿರುವುದಿಲ್ಲ, ಪಂಚನಾಮೆ ಮಾಡಿರುವುದಿಲ್ಲ, ಮುದ್ದೆಮಾಲು ವಶಪಡಿಸಿಕೊಂಡಿರುವುದಿಲ್ಲ ಮತ್ತು ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ, ಆದರೂ ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಮತ್ತು ಹೇಳಿಕೆಯನ್ನು ಠಾಣೆಯಲ್ಲಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **1.15** ಗಂಟೆವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,

3 ನೇ ಅಪರ ಸಿವಿಲ್. ಜಡ್ಜ ಮತ್ತು ಜೆ.ಎಂ.ಎಫ್.ಸಿ,
ಕನಕಪುರ